**ಎಮ್.ವಿ.ಸಿ. ನಂಃ 1453/2024**
**ಪಿ .ಡಬ್ಲ್ಯೂಃ2, ರೂಪಾ**

**ದಿನಾಂಕ : 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಬಿ ಎಸ್ ಕೆ ವಕೀಲರಿಂದ**

ಅಪ್ರಾಪ್ತ ಶರಣು ನನ್ನ ಮಗ. ನನ್ನ ಮಗ 5ನೇ ತರಗತಿ ಓದುತ್ತಾನೆ, ಯಾವ ಶಾಲೆಗೆ ಹೋಗುತ್ತಾನೆ ಎಂದು ಗೊತ್ತಿಲ್ಲಾ. ಸರಕಾರಿನೋ ಅಥವಾ ಖಾಸಗಿ ಶಾಲೆ ಗೊತ್ತಿಲ್ಲಾ. ಆತ ಯಾವ ಶಾಲೆಗೆ ಹೋಗುತ್ತಾನೆ ಎಂದು ಪ್ರಮಾಣ ಪತ್ರ ಸಲ್ಲಿಸಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗ ಇನ್ನು ಶಾಲೆಗೆ ಹೋಗುತ್ತಿದ್ದು, ಒಂದು ವೇಳೆ ಆ ಶಾಲೆ ಹೆಸರು ಹೇಳಿದಲ್ಲಿ ಆತನ ವಯಸ್ಸು ಗೊತ್ತಾಗುತ್ತೆದೆ ಮತ್ತು ಆತನ ಶಾಲೆಗೆ ಹೋಗುತ್ತಾನೆಂದು ಗೊತ್ತಾಗುತ್ತದೆ ಎಂದು ನಾನು ಶಾಲೆ ಹೆಸರು ಹೇಳುತ್ತಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗನ ಬಲಗಾಲು ಮರದಿದೆ. ಒಂದುವಾರ ಆಸ್ಪತ್ರೆಯಲ್ಲಿ ದಾಖಲು ಇದ್ದ. ನನ್ನ ಮಗನ ಮೂಳೆ ಮುರಿತ ಜೋಡಣೆ ಆಗಿ ಆತ ಶಾಲೆಗೆ ಹೋಗಿ ತನ್ನ ಆಟ ಮತ್ತು ಓಡಾಟ ಮಾಡುತ್ತಾನೆ ಎಂದರೆ ಸರಿಯಲ್ಲ. ಆತನಿಗೆ ಯಾವುದೇ ಅಂಗ ನೂನ್ಯತೆ ಇಲ್ಲಾ ಎಂದರೆ ಸರಿಯಲ್ಲ . ನನ್ನ ಮಗ ಶಾಲೆಗೆ ಹೋಗುತ್ತಿದ್ದು ಒಂದು ವೇಳೆ ಹಾಜರು ಪಡಿಸಿದಲ್ಲಿ ಕಡಿಮೆ ಪರಿಹಾರ ಸಿಗುತ್ತದೆಂದು ತಿಳಿದು ಹಾಜರು ಪಡಿಸದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ವೈದ್ಯರಿಂದ ಸುಳ್ಳು ಪ್ರಮಾಣ ಪತ್ರ ಪಡೆದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಆದ ದಿನದಂದು ನನ್ ಮಗ ಮತ್ತು ಮೈಲಾರಿ ಜೇವರ್ಗಿಗೆ ಕಾರ್ಯಕ್ರಮ ಇದ್ದ ಕಾರಣ ಹೊಟಿದ್ದರು. ಅಪಘಾತ ನಾನು ನೋಡಿಲ್ಲ. ಆ ದಿನ ಮೈಲಾರಿ ಮತ್ತು ನನ್ನ ಮಗ ಬೈಕ ಮೇಲೆ ಹೊರಟಿದ್ದರು ಹಿಂದೆ ಪ್ರಭುರಾವ ಇವರು ಕೂಡಾ ಬೈಕ ಮೇಲೆ ಹೊರಟ್ಟಿದ್ದರು, ಪ್ರಭುರಾವ ನನ್ನ ಅಣ್ಣ . ಸದರಿ ಅಪಘಾತ ಪ್ರಭುರಾವ ಇತನ ತಪ್ಪಿನಿಂದ ಆಗಿದೆ. ಮೈಲಾರಿ ನನ್ನ ಮಗ ಬೈಕ ಮೇಲೆ ಹೋಗುವಾಗ ಅವರ ತಪ್ಪಿನಿಂದ ಬಿದ್ದು ಗಾಯ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೈಲಾರಿ ಚಲಾಯಿಸುವ ಬೈಕಗೆ ವಿಮೆ ಇರದ ಕಾರಣ ನಾನು ಪ್ರಭುರಾವ ಇವರ ಬೈಕ ಡಿಕ್ಕಿ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಭುರಾವ ಇತನ ಬೈಕನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಪ್ರಭುರಾವ ಇತನ ಬೈಕಗೆ ವಿಮೆ ಇದ್ದ ಕಾರಣ ಪೋಲಿಸರೊಂದಿಗೆ ಮಿಲಾಫೆ ಆಗಿ ಆತನ ಬೈಕ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನನ್ನ ಮಗನಿಗೆ 10 ವರ್ಷ ಇತ್ತು ತೋರಿಸಲು ಆಧಾರ ಕಾರ್ಡ ಸಲ್ಲಿಸಿದ್ದೇನೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಅಪಘಾತ ಆಗಿಲ್ಲ, ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ :ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**